ನನ್ನ ಬಗ್ಗೆಯೇ ಯೋಚಿಸುತ್ತಿದ್ದವನಲ್ಲವೇ ನಾನು? ಹಾಗನ್ನುತ್ತಾರೆ ನನ್ನನ್ನು ಕಂಡರೆ ಆಗದವರು. ಆದರೆ, ವಾಸ್ತವ ಅದಲ್ಲ. ನಾನು ನನ್ನ ಬಗ್ಗೆ ಯೋಚಿಸುತ್ತಿದ್ದಾಗಲೂ ಇವರ ಬಗ್ಗೆಯೇ ಯೋಚಿಸುತ್ತಿರುವುದು. ಯಾಕೆಂದರೆ ಇವರ ಜತೆ ನನಗೆ ಅವಿನಾ ಸಂಬಂಧವಿದೆ; ಸಿಂಪತಿ ಮಾತ್ರವಲ್ಲ, ಎಂಪತಿ ಇದೆ. ಇದನ್ನು ನಾನು ಮೇನ್‌ಸ್ಟ್ರೀಮಿನವರಿಗೆ ಮನದಟ್ಟು ಮಾಡಬೇಕಾಗಿಲ್ಲ. ಈ ಜನಕ್ಕೆ ಗೊತ್ತಿದೆ, ನನಗೆ ಗೊತ್ತಿದೆ. ಸಮಾನ ಅನುಭವಗಳಲ್ಲಿ ಪಾಲುದಾರರು ನಾವು. ಅಷ್ಟು ಸಾಕು. ಮೂಲಕ ಮಹಾಶಯರು, ರೂಪಕ ಮಹಾಶಯರು ಬೇಕಾದ್ದು ಮಾಡಿಕೊಳ್ಳಲಿ. ಅಲಂಕಾರಪ್ರಿಯರು ಅಲಂಕಾರ ಮಾಡಿಕೊಂಡು ತಿರುಗಲಿ. ವಯಸ್ಸಾದವರು ಬಿಳಿಗೂದಲಿಗೆ ಕಪ್ಪು ಡೈ ಮಾಡಿಕೊಂಡು ಅಸಹ್ಯವಾಗಿ ಕಾಣಿಸಲಿ. ನಾನು ನನ್ನಷ್ಟಕ್ಕೇ ಇರುವೆ; ಅವರನ್ನು ಅನುಸರಿಸುವ ಅಗತ್ಯವಿಲ್ಲ. ಅನುಸರಿಸಿದರೆ ನಾನು ಹತ್ತರಲ್ಲಿ ಹನ್ನೊಂದು ಆಗುತ್ತೇನೆ. ಅದು ಬೇಡ. ಅದರಿಂದ ಸಂಖ್ಯೆ ಜಾಸ್ತಿಯಾಗುತ್ತದಲ್ಲದೆ ಹೊಸತನ್ನು ಸೇರಿಸಿದಂತೆ ಆಗುವುದಿಲ್ಲ. ಹತ್ತರಲ್ಲಿ ಹನ್ನೊಂದು ಎಂದೊಡನೆ ನನ್ನ ಹೃದಯದ ನರವೊಂದು ಸೆಳೆದಂತಾಗುತ್ತದೆ: ಏಂಜೆಲ್ ಎಂಬ ಹುಡುಗಿಯ ನೆನಪು. ಅದೆಲ್ಲಿಂದಲೋ ಅವಳ ಕುಟುಂಬ ನಮ್ಮ ಊರಿಗೆ ಬಂದು ಹೊಸತಾಗಿ ನೆಲಸಿತ್ತು. ನೇಪಾಳೀ ಸ್ತ್ರೀ ಮತ್ತು ಗೋವಾ ಕ್ರಿಶ್ಚಿಯನ್ ಪುರುಷನಿಗೆ ಜನಿಸಿದವಳು. ತಾಯಿಯ ಜತೆ ಇರುತ್ತಿದ್ದಳು. ತಂದೆ ಹೆವಿ ಟ್ರಕ್ ಡ್ರೈವರ್. ಆಲ್ ಇಂಡಿಯಾ, ಕೆಲವು ಸಲ ನೇಪಾಳಕ್ಕೆ ಕೂಡ, ಟ್ರಕ್ ಡ್ರೈವ್ ಮಾಡಿಕೊಂಡು ಹೊರಟು ಹೋಗುತ್ತಿದ್ದ. ಅವನು ಊರಲ್ಲಿ ಕಾಣಿಸಿಕೊಂಡದ್ದೇ ಇಲ್ಲ. ಈ ಕಾರಣಕ್ಕೋ ಏನೋ ಏಂಜೆಲ್ ಮತ್ತು ಅವಳ ತಾಯಿಯ ಬಗ್ಗೆ ಊರವರಿಗೆ ಗುಮಾನಿಯಿತ್ತು. ಆದರೆ, ಏಂಜೆಲ್ ಎಷ್ಟು ಚಂದವಾಗಿದ್ದಳು ಎಂದರೆ ಇಂಥ ಗುಮಾನಿಯೆಲ್ಲ ನಮ್ಮಂಥ ಯುವಕರಿಗೆ ಲೆಕ್ಕಕ್ಕೆ ಇರಲಿಲ್ಲ. ಏಂಜೆಲಳನ್ನ ಪ್ರೀತಿಸುವ ಹತ್ತು ಜನ ಯುವಕರು ನಮ್ಮ ಊರಲ್ಲಿ ಇದ್ದರು; ನಾನು ಹನ್ನೊಂದನೆಯವ. ನಮ್ಮ ಕಾಲೇಜಿನಲ್ಲಿ ಮೊಣಕಾಲು ಕಾಣಿಸುವಂತೆ ಸ್ಕರ್ಟ್ ಹಾಕುತ್ತಿದ್ದುದು ಅವಳೊಬ್ಬಳೇ. ಕೆಲವು ಸಲ ಫ್ಲೋರಲ್ ಡಿಸೈನ್, ಕೆಲವು ಸಲ ಚೌಕುಳಿ, ಕೆಲವು ಸಲ ಗೆರೆ ಗೆರೆಯದು. ಕಾರಿಡಾರುಗಳಲ್ಲಿ ಟಪ್ ಟಪ್ ಅಂತ ನಡೆಯುತಿದ್ದಳು. ಏಂಜೆಲಿಗೆ ನಾನೂ ಒಂದು ಹೂಗುಚ್ಛ ಕೊಡಬೇಡವೇ? ಹತ್ತರಲ್ಲಿ ಹನ್ನೊಂದನೆಯವನಾಗಿದ್ದು! ಹೂಗುಚ್ಛ ಎಲ್ಲಿ ಸಿಗುತ್ತೆ ಎನ್ನುವುದೇ ನನಗೆ ಗೊತ್ತಿರಲಿಲ್ಲ. ನಮ್ಮದು ಅಷ್ಟೊಂದು ದೊಡ್ಡ ಪೇಟೆಯೇನಲ್ಲ. ಹೂ ಮಾರುವ ಮಾರ್ಕೆಟ್ ಕಡೆ ಸೈಕಲ್ ತುಳಿದುಕೊಂಡು ಹೋದೆ ಒಂದು ದಿನ. ಮಲ್ಲಿಗೆ, ಗುಲಾಬಿ, ಸೇವಂತಿ, ಎರವಂತಿ, ಕೇದಿಗೆ, ಕರವೀರ, ಗೆಂಟಿಗೆ, ಕನಕಾಂಬರ, ಮತ್ತು ನನಗೆ ಹೆಸರೇ ಗೊತ್ತಿರದ ಇತರ ಹೂವುಗಳನ್ನು ಕೂಡ ಮಾರುವ ಹೆಂಗಸರು ರಸ್ತೆ ಬದಿಗಳಲ್ಲಿ ಸಾಲಾಗಿ ಕೂತಿದ್ದರು, ಮಲ್ಲಿಗೆ ಮೊಗ್ಗೆಗಳನ್ನು ಮಾಲೆಕಟ್ಟುತ್ತ, ಹರಟುತ್ತ, ಹೂಗಳ ರಾಶಿಗೆ ಆಗಾಗ ನೀರು ಸಿಂಪಡಿಸುತ್ತ, ಚಾ ಸಪ್ಲೈ ಮಾಡುವ ಹುಡುಗನಿಂದ ಚಾ ತೆಗೆದುಕೊಳ್ಳುತ್ತ. 'ಇಲ್ಲಿ ಬುಕೆ ಸಿಗುತ್ತದ?' ಎಂದು ಒಬ್ಬಾಕೆಯನ್ನು ಕೇಳಿದೆ. ಅಲ್ಲಿ ಸೇರಿದ ಹೂವಾಡಿಗಿತ್ತಿಯರೆಲ್ಲ ಚುರುಕಾದರು. 'ಬನ್ನಿ, ಬನ್ನಿ ನಮ್ಮಲ್ಲಿಗೆ,' ಎಂದು ಒಮ್ಮೆಲೇ ಒತ್ತಾಯಿಸತೊಡಗಿದರು. ನಿಜಕ್ಕೂ ಬುಕೆಯನ್ನು ಅವರು ಯಾರೂ ತಯಾರಿಸುತ್ತಿರಲಿಲ್ಲ; ಬಹುಶಃ ಆ ಶಬ್ದ ಕೂಡ ಅವರು ಕೇಳಿರಲಾರರು. ಆದರೂ ಬಂದ ಗಿರಾಕಿಗೆ ಏನನ್ನಾದರೂ ಮಾರಿಬಿಡಬೇಕು ಎನ್ನುವ ಮಾರಾಟದ ಹುಮ್ಮಸ್ಸು ಅವರದು. 'ಮಲ್ಲಿಗೆ ಇದೆ ತಗಳ್ಳಿ ಸ್ವಾಮಿ, ಎಷ್ಟು ಘಮ ಘಮ ಇದೆ ಮೂಸಿ ನೋಡಿ! ಎಷ್ಟು ಹಗುರ ಇದೆ!' ಎಂದು ಮುಷ್ಟಿಯಲ್ಲಿ ಬಾಚಿ ಕೊಡತೊಡಗಿದರು. ನಾನು ಇವರ ಕೈಯಲ್ಲಿ ಸಿಕ್ಕಿಬಿದ್ದ ಹಾಗೆ